**ಒ.ಎಸ್.ನಂಬ್ರ: 379/2020** **ಪಿ.ಡಬ್ಲ್ಯೂ: 1**

ದಿನಾಂಕ: 06-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲು: 7 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಸಿ ಆರ್ ಪಿ ರವರಿಂದ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಕೂಲಿಕೆಲಸ ಮಾಡುತ್ತೇನೆ. ನಾನು ಗಂಗೊಳ್ಳಿಯಲ್ಲಿ ವಾಸವಾಗಿರುತ್ತೇನೆ. ಕೋಣೆಯಲ್ಲಿ ತಾಯಿಯ ಮನೆ ಇದೆ. ಈಗ ಕೋಣೆಯ ಮನೆಯಲ್ಲಿ 1 ಮತ್ತು 4 ನೇ ಪ್ರತಿವಾದಿಗಳು ವಾಸವಾಗಿದ್ದಾರೆ. ನಮ್ಮ ಜಾಗವನ್ನು ಬೇರೆಯವರು ವಶಪಡಿಸಿಕೊಂಡಿದ್ದಾರೆ ಎಂದರೆ ಈ ದಾವೆಯನ್ನು ಹಾಕಿದ್ದೇವೆ. ನನ್ನ ಮತ್ತು 1 ರಿಂದ 5 ನೇ ತಕರಾರು ಇರುವುದಿಲ್ಲ. 6 ಮತ್ತು 7 ನೇ ಪ್ರತಿವಾದಿಯ ನಡುವೆ ಮಾತ್ರ ತಕರಾರು ಇರುತ್ತದೆ. ನನ್ನ ತಾಯಿಯ ಹೆಸರು ಬುಡ್ಡು. ನನ್ನ ತಾಯಿಯ ತಂದೆಯ ಹೆಸರು ಗೊತ್ತಿಲ್ಲ. ನನ್ನ ತಾಯಿಯ ತಾಯಿ ಹೆಸರು ಮಂಜಿ.

ನನ್ನ ತಾಯಿಗೆ 6 ಜನ ಮಕ್ಕಳು ಎಂದರೆ ಸರಿ. ನಾನು ಮತ್ತು 1 ರಿಂದ 5 ನೇ ಪ್ರತಿವಾದಿಗಳು ಒಟ್ಟು 6 ಜನ ಮಕ್ಕಳು. ನನ್ನ ತಂದೆಯ ಹೆಸರು ಕುಷ್ಟ, ಅವರು ಕೂಡ ಕೋಣೆಯಲ್ಲೆ ವಾಸವಾಗಿದ್ದರು. ನನ್ನ ತಂದೆ ತೀರಿ ಹೋದ ಇಸವಿ ನೆನಪಿಲ್ಲ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 4 ಎಕರೆ 54 ಸೆಂಟ್ಸ್. ದಾವಾ ಸ್ವತ್ತು ಒಟ್ಟಿಗೆ ಇರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ ಇದೆ. ಪಶ್ಚಿಮಕ್ಕೆ ಪಂಜುರವರ ಜಾಗ. ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಹಾಡಿ ಜಗ ಇದೆ. ದಾವಾ ಸ್ವತ್ತಿನಲ್ಲಿ ಮೊದಲು ಮನೆ ಇತ್ತು, ಅದು ಬಿದ್ದುಹೋಗಿದೆ, ಈಗ ಗೇರು ಮರಗಳು ಇವೆ.

7 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿದ್ದಾರೆ. ಆಗ 7 ನೇ ಪ್ರತಿವಾದಿ ನಮ್ಮ ಮೇಲೆ ದೂರನ್ನು ಕೊಟ್ಟಿರುತ್ತಾರೆ. ಆ ದೂರಿನ ಪ್ರತಿ ನನ್ನ ಬಳಿ ಇರುವುದಿಲ್ಲ. ನಾನು ಮನೆಯನ್ನು ಒಡೆದು ಹಾಕಿದ್ದೇನೆಂದು ದೂರನ್ನು ಕೊಟ್ಟಿರುತ್ತಾರೆ. ಸಾಕ್ಷಿ ಮುಂದುವರೆದು ನಾನು ಆ ಮನೆಯನ್ನು ಮುಟ್ಟಲು ಹೋಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಕುಷ್ಟರವರಿಗೆ ನಾನು ಜನಿಸುವ ಪೂರ್ವದಲ್ಲಿ ದರಕಾಸ್ತುವಿನಲ್ಲಿ ಮಂಜೂರು ಆಗಿರುತ್ತದೆ. ನಿ.ಪಿ.4 ರ ದಾಖಲೆಯನ್ನು 4 ನೇ ಪ್ರತಿವಾದಿ ಹಾಜರುಪಡಿಸಿರುತ್ತಾರೆ. ನಿ.ಪಿ.4 ರ ದಾಖಲೆಯಲ್ಲಿ ಕುಷ್ಟರವರಿಗೆ 6 ನೇ ಪ್ರತಿವಾದಿಯನ್ನು ಹೊರತುಪಡಿಸಿ ಸುರೇಂದ್ರ, ಸುಜಾತಾ, ಶಿವಶಂಕರ ಮತ್ತು ಶೈಲಜಾ ಎಂಬ ನಾಲ್ಕು ಜನ ಮಕ್ಕಳು ಇದ್ದಾರೆ ಎಂದು ಕಾಣಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸುರೇಂದ್ರ, ಸುಜಾತಾ, ಶಿವಶಂಕರ ಮತ್ತು ಶೈಲಜಾ ರವರನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ, ಸಾಕ್ಷಿ ಮುಂದುವರೆದು ಅವರು ಯಾರೆಂದು ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಕುಷ್ಟರವರ ತಂದೆ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಕುಷ್ಟರವರಿಗೆ 3 ಜನ ಒಡಹುಟ್ಟಿದವರು. ನನ್ನ ತಂದೆ ಕುಷ್ಟರವರು ತೀರಿಕೊಂಡು ಸುಮಾರು 30 ವರ್ಷ ಆಗಿರುತ್ತದೆ. ನನ್ನ ತಂದೆ ತೀರಿಕೊಳ್ಳುವ ಮೊದಲು ವಡೆರಹೋಬಳಿಯಲ್ಲಿ ಅವರ ತಮ್ಮನ ಮನೆಯಲ್ಲಿ ಇದ್ದರು ಎಂದರೆ ಸರಿ. ನನ್ನ ತಂದೆ ತೀರಿಕೊಳ್ಳುವವರೆಗೆ ಅವರ ಮಾನಸಿಕ ಸ್ಥಿತಿ ಸರಿಯಾಗಿ ಇತ್ತು. ನಿ.ಪಿ.6 ರ ದಾಖಲೆ ಮಾಡಲು ಅರ್ಜಿಯನ್ನು ನನ್ನ ತಮ್ಮ ತಂಗಿಯರು ಸೇರಿ ಕೊಟ್ಟಿರುತ್ತಾರೆ. ಆ ಅರ್ಜಿ ಕೊಡುವಾಗ ಏನು ದಾಖಲೆ ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ. ನಾನು ತಹಶೀಲ್ದಾರರ ಮುಂದೆ ಹೇಳಿಕೆ ಕೊಟ್ಟಿಲ್ಲ. 1 ನೇ ಪ್ರತಿವಾದಿ ಹೇಳಿಕೆಯ ಮೇರೆಗೆ ನಿ.ಪಿ.6 ರ ದಾಖಲೆ ಮಾಡಲಾಗಿರುತ್ತದೆ.

ನಿ.ಪಿ.7 ರ ದಾಖಲೆಯನ್ನು ಯಾವ ವರ್ಷ ಮಾಡಲಾಗಿದೆ ಎಂದು ಗೊತ್ತಿಲ್ಲ. ನಿ.ಪಿ.7 ರ ದಾಖಲೆಯನ್ನು ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ. ನಿ.ಪಿ.7 ರ ದಾಖಲೆಯಲ್ಲಿ ಸರ್ಕಾರಿ ಮೊಹರು

ಇರುವುದಿಲ್ಲ ಎಂದರೆ ಸರಿ. ನಿ.ಪಿ.7 ರ ದಾಖಲೆಯನ್ನು ತಯಾರಿಸುವಾಗ ಆ ದಾಖಲೆಯಲ್ಲಿ ತೋರಿಸಿರುವವರನ್ನು ಹೊರತುಪಡಿಸಿ ನಮ್ಮ ಮನೆಯಲ್ಲಿ ಬೇರೆ ಯಾರು ಇರುವುದಿಲ್ಲ. ನಿ.ಪಿ.7 ದಾಖಲೆ ಅಧೀಕೃತ ದಾಖಲೆಯಲ್ಲ, ಅದನ್ನು ನಾನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.2 ರ ದಾಖಲೆಯನ್ನು ಯಾವಾಗ ಪಡೆದಿರುತ್ತೇವೆ ಎಂದು ನೆನಪಿಲ್ಲ.

ದರಕಾಸ್ತು ಆದೇಶದಲ್ಲಿರುವ ಕುಷ್ಟ ಮತ್ತು ನನ್ನ ತಂದೆ ಕುಷ್ಟ ಒಬ್ಬರೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ದರಕಾಸ್ತು ಆದೇಶ ನನ್ನ ತಂದೆ ಕುಷ್ಟರವರಿಗೆ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಡಿತರ ಚೀಟಿ ಮಾಡಿಸಿರುತ್ತೇವೆ, ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ತಂದೆ ಕುಷ್ಟರವರು ಓದಿಲ್ಲ, ಹೆಬ್ಬೆಟ್ಟು ಮಾತ್ರ ಹಾಕುತ್ತಿದ್ದರು. ದರಕಾಸ್ತು ಆದೇಶ ಆಗಿರುವ ಕುಷ್ಟ ತನ್ನ ತಮ್ಮ ಗೋಪಾಲನಿಗೆ ವೀಲುನಾಮೆ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಕುಷ್ಟರವರು ತೀರಿಕೊಂಡ ನಂತರ ಅವರ ಜಾಗ ಗೋಪಾಲರವರಿಗೆ ಹೋಗಿದೆ ಎಂದರೆ ಗೊತ್ತಿಲ್ಲ.

ಗೋಪಾಲರವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ಕುಷ್ಟರವರ ಕುಟುಂಬದ ಯಾರಾದರು ಗೊತ್ತಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾವು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ